ಓಃಎಸ್ಃನಂ.310/15
ಪ.ಡಬ್ಲ್ಯೂ-1

<u>ದಿಃ 06-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ ಡಿ ಎ ವಕೀಲರಿಂದ.</u>

ನಾನು ದಾವೆಯನ್ನು ನನ್ನ ತಂದೆ ನಾಗಪ್ಪನ ಹಿಸ್ಸೆಗಾಗಿ ಸಲ್ಲಿಸಿರುತ್ತೇನೆ. ನನ್ನ ತಂದೆ ಒಟ್ಟು 4 ಜನ ಸಹೋದರರಿದ್ದು, ಅವರು ಚಿಕ್ಕನಿಂಗಪ್ಪ, ನಿಂಗಪ್ಪ, ಬೈರಪ್ಪ, ನಾಗಪ್ಪ. ನನ್ನನ್ನು ಸಿದ್ದಾಪುರ ಗ್ರಾಮದ ರಾಮಪ್ಪನವರಿಗೆ ಮದುವೆ ಮಾಡಿಕೊಟ್ಟಿದ್ದರು. ನನ್ನ ತಂದೆ ನಾಗಪ್ಪನಿಗೆ ನಾನೊಬ್ಬಳೇ ಮಗಳು. ನನ್ನ ಮದುವೆ 50 ವರ್ಷಗಳ ಹಿಂದೆ ನಡೆದಿದ್ದು, ಮದುವೆಯಾದ 25 ವರ್ಷಗಳ ನಂತರ ನಾವು ನಂದೀಪುರಕ್ಕೆ ಹೋಗಿ ವಾಸವಿದ್ದೆವು. ನನ್ನ ಮದುವೆ ಸಮಯದಲ್ಲಿ ನಿಂಗಪ್ಪ, ಬೈರಪ್ಪ, ನನ್ನ ತಂದೆ ನಾಗಪ್ಪ ತೀರಿಕೊಂಡಿದ್ದರು. ನನ್ನ ದೊಡ್ಡಪ್ಪ ಚಿಕ್ಕನಿಂಗಪ್ಪನವರೇ ನನ್ನ ಮದುವೆ ಮಾಡಿರುತ್ತಾರೆ. ಚಿಕ್ಕನಿಂಗಪ್ಪನವರಿಗೆ ಮಕ್ಕಳು ಇರಲಿಲ್ಲ. ನನ್ನ ತಂದೆ ಹಾಗೂ ನನ್ನ ತಾಯಿ ತೀರಿಕೊಂಡಿರುವುದು ನನಗೆ ನೆನಪಿಲ್ಲ. ನನ್ನ ಇಬ್ಬರು ದೊಡ್ಡಪ್ಪನವರು ತೀರಿಕೊಂಡಿರುವ ಬಗ್ಗೆ ನನಗೆ ನೆನಪಿಲ್ಲ. ನನ್ನ ತಂದೆಯ ಅಣ್ಣತಮ್ಮಂದಿರು ಬೇರೆ ಬೇರೆಯಾಗಿ ವಾಸವಿದ್ದರು. ಸಿದ್ದಾಪುರದಲ್ಲಿ ನನ್ನ ದೊಡ್ಡಪ್ಪನ ಸ್ವಂತ ಮನೆ ಇತ್ತು ಎಂದರೆ ಸರಿ.

ನಾನು ನನ್ನ ದೊಡ್ಡಪ್ಪನ ಮನೆಯಲ್ಲಿರುವಾಗ ಒಟ್ಟು ಕುಟುಂಬಕ್ಕೆ 5, 6 ಎಕರೆ ಜಮೀನು ಇತ್ತು. ನನಗೆ ತಿಳುವಳಿಕೆ ಬಂದಾಗ ನನ್ನ ತಂದೆಯ ಅಣ್ಣತಮ್ಮಂದಿರು ಆಸ್ತಿಯಲ್ಲಿ ಭಾಗ ಮಾಡಿಕೊಂಡು ಅವರವರ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆಂದರೆ ಸರಿ. ನನ್ನ ತಂದೆಯ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಾಗ ನನ್ನ ತಂದೆಗೆ ಭಾಗವನ್ನು ನೀಡಿದ್ದು, ಅದರಿಂದ ಈಗ ನನ್ನ ತಂದೆಯ ಪಾಲಿಗೆ ನೀಡುವ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ಸಿದ್ದಾಪುರದ ಕಲ್ಲಪ್ಪ ಬಿನ್ ಚನ್ನಬಸಪ್ಪ ನನಗೆ ಗೊತ್ತು. ದಾವಾಸ್ವತ್ತು ನನ್ನ ತಂದೆಗೆ ಬಂದಿರುವ ಭಾಗ ಎನ್ನುವ ಕಾರಣಕ್ಕೆ ನಾನು ಪಾಲು ಕೇಳುತ್ತಿದ್ದೇನೆ. ನನ್ನನ್ನು ಸಾಕಿದ ಚಿಕ್ಕನಿಂಗಪ್ಪನವರು ನನ್ನ ಮದುವೆಯ ನಂತರ ತೀರಿಕೊಂಡಿರುತ್ತಾರೆ. ದಾವಾಸ್ವತ್ತನ್ನು ನನ್ನ ಮದುವೆ ಕಾಲಕ್ಕೆ 8ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದರು. ನನ್ನ ತಂದೆಯ ಭಾಗವನ್ನು ಕೊಡಿಸಿ ಎಂದು ನನ್ನ ದೊಡ್ಡಪ್ಪನವರಿಗೆ ನಾನು ಕೇಳಿದ್ದೆ. ದಾವಾಸ್ವತ್ತನ್ನು ಬೈರಪ್ಪನವರಿಗಿಂತ ಮುಂಚೆ ನಾವು ಸಾಗುವಳಿ ಮಾಡುತ್ತಿದ್ದೆವು. ನಾನು ಸಿದ್ದಾಪುರಕ್ಕೆ ಆಗಾಗ ಬಂದು ಹೋಗುತ್ತಿದ್ದೆ. ನನ್ನ ದೊಡ್ಡಪ್ಪನಾದ

ಚಿಕ್ಕನಿಂಗಪ್ಪ ತೀರಿ ಹೋದ ನಂತರ ಬೈರಣ್ಣನವರ ಮಕ್ಕಳು ವಾಸವಿದ್ದರು. ನನ್ನ ಮದುವೆ ಕಾಲಕ್ಕೆ ಭಾಗವನ್ನು ನೀಡಿ ಮದುವೆ ಮಾಡಿಕೊಟ್ಟಿದ್ದರಿಂದ ಈಗ ಭಾಗ ಕೇಳಲು ಯಾವುದೇ ಅಸ್ತಿ ಇಲ್ಲ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಚಿಕ್ಕನಿಂಗಪ್ಪ ತೀರಿದ ನಂತರ ಅವರು ವಾಸವಿದ್ದ ಮನೆ ಹಾಗೂ ದಾವಾಸ್ವತ್ತಿನಲ್ಲಿ ಯಾರು ಸ್ವಾದೀನ ಹೊಂದಿರುತ್ತಾರೆಂದು ನಾನು ನೋಡಿರುವುದಿಲ್ಲ.

ದಾವಾಸ್ವತ್ತನ್ನು ***8*** ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾಗ ನಾನು ಇದು ನನ್ನ ತಂದೆಯ ಸ್ವತ್ತು ನನಗೆ ಕೊಡಿ ಎಂದು ***20, 30*** ವರ್ಷಗಳಿಂದ ಕೇಳುತ್ತಲೇ ಇರುತ್ತೇನೆ. ಆದರೆ ಯಾವುದೇ ನೋಟೀಸು ನೀಡಿರುವುದಿಲ್ಲ. ***1*** ನೇ ಪ್ರತಿವಾದಿಯ ಗಂಡ ನನಗೆ ದೊಡ್ಡಪ್ಪ ನಿಂಗಪ್ಪನ ಮಗನಾಗಬೇಕು. ದಾವಾಸ್ವತ್ತನ್ನು ***1*** ರಿಂದ ***4*** ನೇ ಪ್ರತಿವಾದಿಗಳು ಕಲ್ಲಪ್ಪ ಬಿನ್ ಚನ್ನಬಸಪ್ಪನವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಕಲ್ಲಪ್ಪನವರಿಂದ ***8*** ನೇ ಪ್ರತಿವಾದಿ ಬೈರಪ್ಪ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾಸ್ವತ್ತನ್ನು ***8*** ನೇ ಪ್ರತಿವಾದಿ ***9*** ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಪರಭಾರೆ ಮಾಡಿದ್ದು, ಆದ್ದರಿಂದ ***9*** ನೇ ಪ್ರತಿವಾದಿಯೇ ದಾವಾಸ್ವತ್ತಿನ ಮಾಲೀಕರು ಎಂದರೆ ಸರಿಯಲ್ಲ. ದಾವಾಸ್ವತ್ತು ***8*** ನೇ ಪ್ರತಿವಾದಿಯ ಸ್ವಯಾರ್ಜಿತವಾದ ಆಸ್ತಿಯಾಗಿದ್ದರಿಂದ ತನ್ನ ಮಗಳಾದ ***9*** ನೇ ಪ್ರತಿವಾದಿಗೆ ದಾನಪತ್ರದ ಮೂಲಕ ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಚಿಕ್ಕನಿಂಗಪ್ಪನವರ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಿದ್ದಾಪುರದಲ್ಲಿ ನನಗೆ ಸ್ವಂತ ಮನೆ ಇರುತ್ತದೆ. ನನಗೆ ಇರುವ ಮನೆ ನನ್ನ ಸ್ವಂತದ್ದಾಗಿರುತ್ತದೆ. ನಾನು ಸದ್ಯ ವಾಸವಿರುವ ಮನೆಯನ್ನು ನನ್ನ ದೊಡ್ಡಪ್ಪ ನನಗೆ ನೀಡಿರುತ್ತಾರೆ. ದಾವಾಸ್ವತ್ತನ್ನು ಖರೀದಿಸಿದಾಗಿನಿಂದ ***8*** ನೇ ಪ್ರತಿವಾದಿ ಸ್ವಾದೀನದಲ್ಲಿದ್ದು, ಪ್ರಸ್ತುತ ***9*** ನೇ ಪ್ರತಿವಾದಿ ಸ್ವಾದೀನದಲ್ಲಿರುತ್ತಾರೆಂದರೆ ಸುಳ್ಳು. ನಾನು ಉದ್ದೇಶ ಪೂರ್ವಕವಾಗಿ ಎಲ್ಲಾ ವಿಷಯ ತಿಳಿದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯ್ತು)

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***

ಓ:ಎಸ್:ನಂ.

ಡಿ.ಡಬ್ಲ್ಯೂ-1

*ದಿ: 30-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.*

ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಪಿ ಆರ್ ವಕೀಲರಿಂದ.

ಮರುವಿಚಾರಣೆ : ಇರುವುದಿಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.

ಓಃಎಸ್ಃನಂ.
ಡಿ.ಡಬ್ಲ್ಯೂ-2

***ದಿಃ 30-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ______ ವಕೀಲರಿಂದ.

ಮರುವಿಚಾರಣೆ ಃ ಇರುವುದಿಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.

ಓ.ಎಸ್.ನಂ.
ಡಿ.ಡಬ್ಲ್ಯೂ-2

<u>ದಿಃ 30-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಆರ್.ಜಿ. ವಕೀಲರಿಂದ.</u>

<u>ಮರುವಿಚಾರಣೆ</u> ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.

ಓ:ಎಸ್:ನಂ.
ಡಿ.ಡಬ್ಲ್ಯೂ-2

***ದಿ: 30-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಆರ್.ಜಿ. ವಕೀಲರಿಂದ.***

**ಮರುವಿಚಾರಣೆ** *: ಇರುವುದಿಲ್ಲ.*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.

ಓ:ಎಸ್:ನಂ.
ಡಿ.ಡಬ್ಲ್ಯೂ-2

<u>ದಿ: 30-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಆರ್.ಜಿ. ವಕೀಲರಿಂದ.</u>

<u>ಮರುವಿಚಾರಣೆ</u> : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.